ಮಾನ್ಯ ಸದಸ್ಯರಿಗೆ ಕೊಟ್ಟು ಕಳುಹಿಸುತ್ತೇನೆ.

ಡಾ: ಎಂ.ಸಿ. ಸುಧಾಕರ್: ನನ್ನ ಕ್ಷೇತ್ರದ ಕೆರೆಗಳ ಬಗ್ಗೆ ಮಾನ್ಯ ಮಂತ್ರಿಯವರಿಗೆ ಪತ್ರವನ್ನು ಕೊಟ್ಟಿದ್ದೆ. ಒಂದು ದೊಡ್ಡ ಕೆರೆ ಒತ್ತುವರಿಯಾಗಿದೆ. ಸುಮಾರು 40 ವರ್ಷಗಳ ಹಿಂದೆ ಸುಮಾರು 85 ಎಕರೆ ಅಲ್ಲಿ ಒತ್ತುವರಿಯಾಗಿದೆ, ಸುಮಾರು 35–40 ಕುಟುಂಬಗಳು ಉಳುಮೆ ಮಾಡುತ್ತಿವೆ. ಬಹಳ ವರ್ಷಗಳಿಂದ ಇದನ್ನು ಯಾರೂ ಗುರುತಿಸಿಲ್ಲ. ಇತ್ತೀಚಿಗೆ ಕೆರೆ ಕೆಲಸ ಮಾಡಿದ ಸಂದರ್ಭದಲ್ಲಿ ಇದು ಬೆಳಕಿಗೆ ಬಂದಿದೆ ಎಂದು ನಾನು ನಮ್ಮ ಜಿಲ್ಲಾಡಳಿತಕ್ಕೆ, ಜಿಲ್ಲಾಧಿಕಾರಿಗಳಿಗೆ ತಿಳಿಸಿದರೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ನಂತರ, ನಾನು ಸನ್ಮಾನ್ಯ ಮಂತ್ರಿಯವರಿಗೆ, ಕಾರ್ಯದರ್ಶಿಯವರಿಗೆ ವಿವರವಾಗಿ ಪತ್ರ ಬರೆದು ಅಲ್ಲಿನ ಜನ ಆ ಜಾಗ ತಮಗೆ ಬೇಕು ಎಂದು ಕೇಳುತ್ತಿದ್ದಾರೆ, ಕಾನೂನು ರೀತ್ಯಾ ಹೋದಾಗ ಉಚ್ಚ ನ್ಯಾಯಾಲಯದ, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ನೋಡಿದಾಗ, ಕೆರೆ ಜಾಗವನ್ನು ಬಿಟ್ಟುಕೊಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ಆದ್ದರಿಂದ, ತಾವು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು. ಇದುವರೆಗೂ ಕ್ರಮವಾಗಿಲ್ಲ. ಒಂದು ಸಲ ತಾವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಆದರೆ, ಕ್ರಮ ಏನೂ ಆಗುತ್ತಿಲ್ಲ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಆಗಬೇಕಾಗುತ್ತದೆ. ದಯವಿಟ್ಟು, ಮಾನ್ಯ ಮಂತ್ರಿಯವರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಸುಧಾಕರ್‌ರವರು ಕೇಳಿರುವ ಪ್ರಶ್ನೆ ಪ್ರತ್ಯೇಕವಾಗಿದೆ. ನನ್ನ ಹತ್ತಿರ ಸದ್ಯಕ್ಕೆ ಮಾಹಿತಿ ಇಲ್ಲ. ಆ ಮಾಹಿತಿಯನ್ನು ಆಮೇಲೆ ಅವರಿಗೆ ಕಳುಹಿಸುತ್ತೇನೆ.

ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳು

65 (954) ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ) :– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜರ್ಮನಿಯ ಜಿ.ಟಿ.ಜೆಡ್.ಐ.ಎಸ್. ಕಂಪನಿಯ ಸಹಯೋಗದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ 2011ರ ಜುಲೈ ತಿಂಗಳಿಂದ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭಿಸುವುದಾಗಿ ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಪ್ರಗತಿಯ ವರದಿ ಹಾಗೂ ಎರಡೂ ಕಛೇರಿ ವಿಳಾಸಗಳನ್ನು ಒದಗಿಸುವುದು);

(ಆ) ಈ ಎರಡೂ ಜಿ.ಟಿ. ಜೆಡ್‌ಗಳ ಅಧಿಕಾರವನ್ನು ಯಾರಿಗೆ ವಹಿಸಿಕೊಡಲಾಗಿದೆ, ಅವರ ಕರ್ತವ್ಯ / ಜವಾಬ್ದಾರಿಗಳೇನು, ಸದರಿ ಅಧಿಕಾರಿಗಳ ನೇಮಕಾತಿ ವಿಧಾನವನ್ನು ಮತ್ತು ಅವರಿಗೆ ವಿಧಿಸಲಾದ ಷರತ್ತುಗಳ ವಿವರಗಳನ್ನು ಒದಗಿಸುವುದು;

(ಇ) ಜಿ.ಟಿ.ಜೆಡ್‌ಗಾಗಿ ಹುದ್ದೆಗಳ ಮಂಜೂರಾತಿ ನೀಡಲಾಗಿದೆಯೇ (ಮಂಜೂರಾತಿ ಆದೇಶದ ಪ್ರತಿ ಮತ್ತು ಭರ್ತಿ ಮಾಡಲಾದ ಎಲ್ಲಾ ವೃಂದದ ಸಿಬ್ಬಂದಿಯವರ ಸಂಪೂರ್ಣ ವಿವರಗಳನ್ನು ಒದಗಿಸುವುದು);

(ಈ) ಜಿ.ಟಿ.ಜೆಡ್‌ಗಳ ಅನುಷ್ಠಾನಕ್ಕಾಗಿ ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು (ಖರ್ಚು ವೆಚ್ಚದ ವಿವರಗಳನ್ನು ಅವಶ್ಯಕ ದಾಖಲಾತಿಗಳೊಂದಿಗೆ ಒದಗಿಸುವುದು)?

ಶ್ರೀ ಬಿ. ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು):

(ಅ) ಬಂದಿದೆ. ಪ್ರಗತಿ ವರದಿ ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಕಛೇರಿ ವಿಳಾಸ:

<u>ಬೆಂಗಳೂರು:</u>

ಸಿ.ಒ.ಇ. ಕಟ್ಟಡ,
ಕೌಶಲ್ಯ ಭವನ ಆವರಣ,
ಸರ್ಕಾರಿ ಕೈಗಾರಿಕಾ ತರಬೇತಿ (ಮ),
ಹಿಂಭಾಗ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–560 029.

<u>ಗುಲ್ಬರ್ಗಾ</u>

ಸಿ.ಒ.ಇ. ಕಟ್ಟಡ,
ಸರ್ಕಾರಿ ಕೈಗಾರಿಕಾ ತರಬೇತಿ ಆವರಣ,
ಎಂ.ಎಸ್.ಕೆ. ಮಿಲ್ ರಸ್ತೆ,
ಗುಲ್ಬರ್ಗಾ–585 101.

(ಆ) ಅಧಿಕಾರವನ್ನು ನಿರ್ದೇಶಕರುಗಳಿಗೆ ವಹಿಸಿಕೊಡಲಾಗಿದೆ.

ಕರ್ತವ್ಯ / ಜವಾಬ್ದಾರಿಗಳು:

ಇವರು ಸಂಸ್ಥೆಯ ಮುಖ್ಯಸ್ಥರಾಗಿರುತ್ತಾರೆ. ಸಂಸ್ಥೆಯಲ್ಲಿ ನೀಡಬೇಕಾಗಿರುವ ವಿವಿಧ ತರಬೇತಿಗಳನ್ನು ಆಯೋಜಿಸಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸರ್ಕಾರ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಕೈಗಾರಿಕಾ ಉದ್ಯಮೆಗಳ ಜೊತೆ ಸಂಪರ್ಕಿಸಿ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು. ಇವರು ಬೋಧಕ ವರ್ಗದವರಿಗೆ ಮಾರ್ಗದರ್ಶನ ನೀಡುವುದು ಹಾಗೂ ಪ್ರತಿದಿನ ನಿಗಧಿತ ಪ್ರಗತಿ ಸಾಧಿಸಬೇಕಾಗಿರುತ್ತದೆ.

ಹೊಸ ಮಾರುಕಟ್ಟೆಗೆ ಅನುಗುಣವಾಗಿ ಹಾಗೂ ಕೈಗಾರಿಕಾ ಉದ್ಯಮಗಳ ಬೇಡಿಕೆಗಳಿಗೆ ಅನುಗುಣವಾಗಿ ಹೊಸ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇದಲ್ಲದೆ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಸಂಸ್ಥೆಗೆ ಆದಾಯ ಬರುವಂತೆ ಕಾರ್ಯಕ್ರಮ ರೂಪಿಸಿ ಯಶಸ್ವಿಯಾಗಿ ನೀಡಬೇಕಾಗಿರುತ್ತದೆ.

ನೇಮಕಾತಿ ವಿಧಾನ:

ವೆಬ್‌ಸೈಟ್ ಹಾಗೂ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಜಾಹಿರಾತನ್ನು ಬಿಡುಗಡೆ ಮಾಡಲಾಗಿದೆ. ಆ ನಂತರ GIZ-IS ರವರು ಪರಿಷ್ಕರಿಸಿ, ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಇಲಾಖೆಗೆ ನೀಡಿರುತ್ತಾರೆ. ಅದರಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಹಾಗೂ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, GIZ Expert, ಕೈಗಾರಿಕಾ ಉದ್ಯಮಗಳ ಹಾಗೂ ಕೈಗಾರಿಕಾ ಉದ್ಯಮ ಸಂಸ್ಥೆಗಳ ಸಮಿತಿ ರಚಿಸಿ, ಸಂದರ್ಶನ ಏರ್ಪಡಿಸಿದ್ದು, ನಿರ್ದೇಶಕರುಗಳ ಆಯ್ಕೆ ಮಾಡಲಾಗಿದೆ.

ಪರತ್ತು:

ವಿದ್ಯಾರ್ಹತೆ: ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ

ಅನುಭವ: ಕೈಗಾರಿಕಾ ಉದ್ಯಮಗಳಲ್ಲಿ, ಕೇಂದ್ರ ಸರ್ಕಾರ / ರಾಜ್ಯ ಸರ್ಕಾರ / ಪ್ರತಿಷ್ಠಿತ ವಿದ್ಯಾಸಂಸ್ಥೆಗಳ ಉನ್ನತ ಸ್ಥಾನದಲ್ಲಿ ಕನಿಷ್ಠ 15 ವರ್ಷಗಳ ಕಾರ್ಯನಿರ್ವಹಿಸಿರುವ ಅನುಭವ ಇರಬೇಕು.

(ಇ) ಬೆಂಗಳೂರು ಹಾಗೂ ಗುಲ್ಬರ್ಗಾ ಸಂಸ್ಥೆಗಳ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ. ವಿವರವನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

(ಈ) ಸರ್ಕಾರದಿಂದ ರೂ. 10.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಇದರಲ್ಲಿ ಇದುವರೆವಿಗೂ ರೂ. 3.26 ಕೋಟಿ ಖರ್ಚಾಗಿರುತ್ತದೆ.

ಖರ್ಚು ವೆಚ್ಚದ ವಿವರಗಳನ್ನು ಅನುಬಂಧ–3ರಲ್ಲಿ ಒದಗಿಸಲಾಗಿದೆ.

ಅನುಬಂಧ–1

ಪ್ರಗತಿ ವರದಿ

ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳು – ಬೆಂಗಳೂರು ಹಾಗೂ ಗುಲ್ಬರ್ಗಾ

1. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಮತ್ತು GIZ-IS Germany ರವರ ಸಹಯೋಗದೊಂದಿಗೆ ರಾಜ್ಯದ ಬೆಂಗಳೂರು ಹಾಗೂ ಗುಲ್ಬರ್ಗಗಳಲ್ಲಿ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಎರಡು ಕೇಂದ್ರಗಳು ನೀಡುವ ಅಂತರ ರಾಷ್ಟ್ರೀಯ ಪ್ರಮಾಣ ಪತ್ರವು ರಾಜ್ಯದ ಯುವ ಜನರು ಜಾಗತೀಕ ಉದ್ಯೋಗ ಪಡೆಯಲು ಸಹಕಾರಿಯಾಗಿರುತ್ತದೆ. 4 ವರ್ಷಗಳ ಅವಧಿಯಲ್ಲಿ ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಆರ್ಥಿಕವಾಗಿ ಸ್ವಯತ್ತವಾಗಿ ಬೆಳೆಯಲಿದ್ದು, ಸಾರ್ವಜನಿಕ ಖಾಸಗಿ ವಲಯದಲ್ಲಿ ಪೂರಕವಾದ ಸಾಮರ್ಥ್ಯ ಹೊಂದಿರುತ್ತದೆ.
2. ಸದರಿ ಯೋಜನೆಗೆ 2011–12ನೇ ಸಾಲಿಗಾಗಿ ರಾಜ್ಯ ಸರ್ಕಾರದಿಂದ ರೂ 10.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ಅನುದಾನ ಇನ್ನು ಬಿಡುಗಡೆ ಆಗಿರುವುದಿಲ್ಲ.
3. ಬೆಂಗಳೂರು ಕೇಂದ್ರಕ್ಕೆ 15 ಹುದ್ದೆಗಳ ಮಂಜೂರಾತಿ ದೊರಕಿದ್ದು. ಅದರಲ್ಲಿ 10 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಹಾಗೂ ಗುಲ್ಬರ್ಗಾ ಕೇಂದ್ರಕ್ಕೆ 13 ಹುದ್ದೆಗಳ ಮಂಜೂರಾತಿ ದೊರಕಿದ್ದು. ಅದರಲ್ಲಿ 08 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.
4. ಪ್ರಸ್ತುತ ಬೆಂಗಳೂರು ಕೇಂದ್ರವು ಸಿ.ಒ.ಇ. ಕಟ್ಟಡ, ಕೌಶಲ್ಯ ಭವನದ ಆವರಣ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಮ) ಹಿಂಭಾಗ, ಹೊಸೂರು ರಸ್ತೆ, ಬೆಂಗಳೂರು–560 029. ಹಾಗೂ ಗುಲ್ಬರ್ಗಾ ಕೇಂದ್ರವು ಸಿ.ಒ.ಇ ಕಟ್ಟಡ, ಸರ್ಕಾರಿ ಕೈಗಾರಿಕಾ ತರಬೇತಿ ಆವರಣ, ಎಂ.ಎಸ್.ಕೆ. ಮಿಲ್ ರಸ್ತೆ, ಗುಲ್ಬರ್ಗಾ–585 101. ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ.
5. ಬೆಂಗಳೂರು ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಬಾಗಲುಗುಂಟೆಯಲ್ಲಿ 2 ಎಕರೆ ಜಮೀನನ್ನು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಮಂಜೂರಾಗಿರುತ್ತದೆ.

ಹಾಗೂ ಗುಲ್ಬರ್ಗ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಸರ್ಕಾರದ ವತಿಯಿಂದ 20 ಎಕರೆ ಜಮೀನು ಮಂಜೂರಾಗಿರುತ್ತದೆ.

6. CISCO ಹಾಗೂ Welding ವೃತ್ತಿಗಳಿಗೆ ಸಂಬಂಧಿಸಿದಂತೆ ಯಂತ್ರೋಪಕರಣಗಳನ್ನು ಖರೀದಿಸಿ ಒದಗಿಸಲಾಗಿದೆ.
7. ಭೋಧಕ ವರ್ಗದವರಿಗೆ GIZ-IS ವತಿಯಿಂದ ವಿವಿಧ ಕೇಂದ್ರಗಳಲ್ಲಿ ತರಬೇತಿ ನೀಡಲಾಗಿದೆ.
8. ನವೆಂಬರ್ ತಿಂಗಳಿಂದ ಎರಡೂ ಕೇಂದ್ರಗಳಲ್ಲಿ CISCO IT Essential ಬಗ್ಗೆ ಈಗಾಗಲೇ ತರಬೇತಿ ಪ್ರಾರಂಭಿಸಲಾಗಿರುತ್ತದೆ.
9. ಡಿಸೆಂಬರ್ ತಿಂಗಳ ಎರಡನೇ ವಾರದಲ್ಲಿ CCNA ಹಾಗೂ Welding ವೃತ್ತಿಗಳ ತರಬೇತಿಗಳನ್ನು ಪ್ರಾರಂಭಿಸಲಾಗುವುದು.

ANNEXURE - 2
LIST OF SELECTED CANDIDATES
KGTTI BANGALORE

Sl. No.	Name of the Candidate Sri / Smt	Designation
1	Prateek Padakannaya	Director
2	Mruthyunjaya G.P	Dy. Director
3	Nagaveni R	Sr. Manager
4	Karimulla Shaik	Sr. Engineer
5	Savitha H.P	Jr. Engineer
6	V. Jothivanan	Jr. Engineer
7	Lakshmi B	Administrative Asst.
8	Lakshmi B.S.	Business Development Executive
9	Kalyan Kumar	Accountant
10	Ashwini Mahadev Prasad	Front Office Executive

KGTTI GULBARGA

Sl. No.	Name of the Candidate Sri / Smt	Designation
1	M Kotaiah	Director
2	Vijaya Kumar G	Sr. Engineer
3	Basawaraj M Beelagi	Jr. Engineer
4	Basawaraj Rejantal	Jr. Engineer
5	Umesh Hatti	Jr. Engineer
6	Prakash S	Technician
7	Shivayogi S.K	Accountant & Administrative Assistant
8	Santosh R.N	Front Office Executive

ANNEXURE - 3

KGMSDC BANGALORE

STATEMENT OF EXPENDITURE

Sl. No.	Description	Amount
1	Survey Work carried at Bangalore & Gulbarga	86828
2	Recruitment & Tender notification Advertisement	331236
3	Payment to GIZ - IS	26460000
4	Providing Fencing to land at Gulbarga by Nirmithi Kendra	1112000
5	Purchase of office equipment & stationery	145760
6	Payment towards KRIDL, Bangalore	3700000
7	Salary for Staff at Bangalore & Gulbarga	850000
	Total	32685824

SRI QAMARUL ISLAM:- Sir, This schemeof GIZ is a very important scheme which was announced. 50% share ನಲ್ಲಿ One centre at Gulbarga another one at Bangalore. ಗುಲ್ಬರ್ಗದಲ್ಲಿ 20 ಎಕರೆ ಜಮೀನು ಮತ್ತು ಬೆಂಗಳೂರಿನಲ್ಲಿ 2 ಎಕರೆ ಜಮೀನು. 2011–12ರ ಬಜೆಟ್ ನಲ್ಲಿ announce ಮಾಡಿದ್ದಾರೆ. 65 ಕೋಟಿಯಲ್ಲಿ 32 crores of rupees have been spent. 10 ಕೋಟಿ sanction ಆಗಿದೆ. ತಾವು ಹೇಳುತ್ತೀರಿ, 1.62 ಕೋಟಿ expenditure ಆಗಿದೆ ಎಂದು. ಅಲ್ಲಿ ಏನೂ ಕೆಲಸ ಪ್ರಾರಂಭ ಆಗಿಲ್ಲ. ನಿಮ್ಮ Director ಇಲ್ಲಿ statement ಕೊಟ್ಟಿದ್ದಾರೆ ಯಾವುದೇ ಕೋರ್ಸ್‌ನಲ್ಲಿ ಈ ಕೆಲಸ ಪ್ರಾರಂಭ ಮಾಡಬೇಕು ಎಂದು. For multiskill, you have collaborated with the German company. What type of training you are giving?. Today you have diverted all the five schemes which you have taken. Today India is Auto Icon in manufacturing. CAD ಬೇಕು, ಕ್ಯಾನ್ ಬೇಕು, International welding ಬೇಕು. ಇಲ್ಲಿ ಏನು ಕೆಲಸ ನಡೆಯುತ್ತಿದೆ. C.O.E building which was already constructed in Gulbarga with 3 crore rupees, you have just shifted those boys. where those boys are going out? ಅಲ್ಲಿ ಏನೂ ಕೆಲಸ ನಡೆಯುತ್ತಿದೆ. ಇಲ್ಲಿ ಏನು ಕೆಲಸ ನಡೆಯುತ್ತದೆ. you have said all the five schemes will be commenced from July 2011. ಒಂದೇ ಒಂದು ಸ್ಕೀಂ ಪ್ರಾರಂಭ ಆಗಿದೆಯೇ ಎಂದು ನನಗೆ ಹೇಳಿ. ಏಕೆ ಆಗಿಲ್ಲ? ಬಜೆಟ್ ನಲ್ಲಿ 10 ಕೋಟಿ ಹಣಕಾಸು ಮಂತ್ರಿಗಳು ಕೊಟ್ಟಿದ್ದಾರೆ. ಆ ಹತ್ತು ಕೋಟಿ ಏಕೆ utilize ಮಾಡಿಲ್ಲ. Sir, this is very important, ನಮ್ಮ ಕರ್ನಾಟಕಕ್ಕೆ ಹೆಸರು ಬರುತ್ತದೆ, ಸರ್ಕಾರಕ್ಕೆ ಹೆಸರು ಬರುತ್ತದೆ, Central government ಹಣ ಕೊಡುತ್ತದೆ. ಉತ್ತರವನ್ನು ಹೇಳಿ.

ಶ್ರೀ ಬಿ. ಎನ್. ಬಚ್ಚೇಗೌಡ: Karantaka Multi Skill Development Centre ಎಂದು ರಾಷ್ಟ್ರದಲ್ಲಿ ಎರಡು Centers ಕೊಟ್ಟಿದ್ದು, ಅದು ಕರ್ನಾಟಕಕ್ಕೆ ಮಾತ್ರ ಸಿಕ್ಕಿದೆ. ಕೇಂದ್ರ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ನಮ್ಮ ಮುಖ್ಯಮಂತ್ರಿಯವರು ಈ ಎರಡೂ Centers ಗೆ ವಿಶೇಷವಾಗಿ ಗುಲಬರ್ಗಾದಲ್ಲಿ 20 ಎಕರೆ ಜಮೀನು ಕೊಡಿ ಎಂದು ಹೇಳಿದ್ದರು. KIADB ಮೂಲಕ ಜಾಗ ಕೊಡುವಂಥ ಕಾರ್ಯ ಮಾಡಿದೆವು. ನಮ್ಮಲ್ಲಿ ಬಾಗಲುಗುಂಟೆ ಎಂಬಲ್ಲಿ ಬಹಳ ಬೆಲೆಬಾಳುವ ಭೂಮಿ ಇತ್ತು, ಅಂದರೆ ಒಂದು

ಎಕರೆಗೆ 5 ಕೋಟಿ ರೂಪಾಯಿಗಳಾಗುತ್ತದೆ. ಆಂಥ ಕಡೆ 2 ಎಕರೆ skilled ಗೆ ವಿಶೇಷವಾಗಿ ಕೊಡಬೇಕೆಂದು ಕೊಟ್ಟಿವು. ಇದರಲ್ಲಿ ಕೇಂದ್ರ ಸರ್ಕಾರದ 50 ಭಾಗ ಮತ್ತು ರಾಜ್ಯ ಸರ್ಕಾರದ 50 ಭಾಗವಿದೆ. ಅಂದರೆ, 36+36=72 ಕೋಟಿ ರೂಪಾಯಿ ಇದೆ. G.I.Z & I.S. ಎಂಬ ಕಂಪನಿಯನ್ನು consultancy ಎಂದು ಹೇಳಿ ಅವರಿಗೆ 4 ವರ್ಷಗಳಿಗೆ 16 ಕೋಟಿ ರೂಪಾಯಿ ಕೊಡುವ ಸ್ಕೀಂ ಮಾಡಿದೆವು. ಆಮೇಲೆ, ನಮಗೇ sustainability ಬರುತ್ತದೆ. ಎಲ್ಲಿ ಪ್ರಾರಂಭ ಮಾಡಿದ್ದಾರೆಂದು ತಾವು ಕೇಳಿದಿರಿ. ನಮ್ಮಲ್ಲಿ Centre Of Excellence ಎಂದು ಬನ್ನೇರುಘಟ್ಟದ ನಮ್ಮ ಕಛೇರಿಯಲ್ಲಿ ಸಿ.ಒ.ಇ. ಆಫೀಸ್‌ನಲ್ಲಿ ಪ್ರಾರಂಭ ಮಾಡಿದ್ದೇವೆ. ಅದೇ ರೀತಿ ಗುಲಬರ್ಗಾದಲ್ಲಿರತಕ್ಕಂಥ ITI ಸಂಸ್ಥೆಯಲ್ಲಿ Centre Of Excellence ಎಂದು ಪ್ರಾರಂಭ ಮಾಡಿದ್ದೇವೆ. ಶನಿವಾರ ತಾವೆಲ್ಲ ಹೋಗಿ ನೋಡಿಕೊಂಡು ಬಂದಿದ್ದೀರೆಂಬ ಮಾಹಿತಿ ಬಂತು. ತಾವು ವಿಷಾದವಾಗಿ ಒಂದು, ಒಂದೂವರೆ ಗಂಟೆ ಕಾಲ ಅಲ್ಲಿ ಏನು ಮಾಡುತ್ತಿದ್ದಾರೆ ಎಂದು ಪರಿಶೀಲಿಸಿದ್ದೀರಿ ಎನ್ನುವ ಮಾಹಿತಿ ಬಂತು. ಮೊದಲು 36+36=72 ಕೋಟಿ ರೂಪಾಯಿಗಳನ್ನು ಕೊಟ್ಟರು. ಅದು ಸಾಕಾಗುವುದಿಲ್ಲವೆಂದು 40+40=80 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮತ್ತೆ ಕೇಂದ್ರ ಸರ್ಕಾರ additional money ಕೊಡಿ ಎಂದು ನಮ್ಮ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ 40+40 ಕೋಟಿ ರೂಪಾಯಿ ಕೊಡುವಂಥದ್ದಾಯಿತು. ಇದರಲ್ಲಿ ಕೇಂದ್ರ ಸರ್ಕಾರ ಇನ್ನೂ ಹಣ ಕೊಟ್ಟಿಲ್ಲ. ನಮ್ಮ ರಾಜ್ಯ ಸರ್ಕಾರದ 10 ಕೋಟಿ ರೂಪಾಯಿ ಆಯಿತು. ಈ Multi skilled Development Centre ಮಾಡುವುದಕ್ಕೆ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಎಸ್.ವಿ. ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಒಂದು Governing Council ರಚಿಸಲಾಗಿದೆ. ನಮ್ಮ ಇಲಾಖೆಯ ಕಾರ್ಯದರ್ಶಿಯವರು, ಆಯುಕ್ತರು, German Expert ಇವರೆಲ್ಲ ಇರುವ ಸಮಿತಿ ರಚಿಸಲಾಗಿದೆ. ಇದಕ್ಕೆ ನಿರ್ದೇಶಕರುಗಳನ್ನು ಆಯ್ಕೆ ಮಾಡಲು ಪತ್ರಿಕೆಗಳಿಗೆ ಜಾಹಿರಾತು ನೀಡಿ ಆಯ್ಕೆ ಮಾಡಲಾಗಿದೆ. ಈ ವಿವರಗಳನ್ನು ತಮಗೆ ಈಗಾಗಲೇ ನೀಡಲಾಗಿದೆ. ಇದನ್ನು ಮಾಡಿಕೊಂಡು ಬಂದಿದ್ದೇವೆ. ನವೆಂಬರ್ ತಿಂಗಳಲ್ಲಿ ಒಂದು ತಿಂಗಳ ಕೋರ್ಸ್ ಮಾಡುವಂಥದ್ದು, ಎರಡು ತಿಂಗಳ ಕೋರ್ಸ್ ಮಾಡುವಂಥದ್ದು, ಮೂರು ತಿಂಗಳ ಕೋರ್ಸ್ ಮಾಡುವಂಥದ್ದು, ಆರು ತಿಂಗಳ ಕೋರ್ಸ್ ಮಾಡುವಂಥದ್ದು ಇಂಥದ್ದಕ್ಕೆ CISCO and Welding ಗೆ ಸಂಬಂಧಿಸಿದಂತೆ ಯಂತ್ರೋಪಕರಣಗಳನ್ನು ಒದಗಿಸಿ ಅಲ್ಲಿ ಪ್ರಾರಂಭ ಮಾಡಿದ್ದೇವೆ. ಹಾಗೆಯೇ, ಬೆಂಗಳೂರಿನಲ್ಲಿ ನವೆಂಬರ್ ತಿಂಗಳಲ್ಲಿ *CISCO IT* essential ಬಗ್ಗೆ ಈಗಾಗಲೇ ತರಬೇತಿಯನ್ನು ಪ್ರಾರಂಭ ಮಾಡಿದ್ದೇವೆ.

ತರಬೇತಿದಾರರನ್ನೂ ಆಯ್ಕೆ ಮಾಡಿದ್ದೇವೆ. ಅದೇ ರೀತಿ, training for trainers ಜೊತೆಗೆ ಇವರಿಗೆ training ಕೊಡುವಂಥದ್ದು ಎರಡೂ ಮಾಡಿ ಕಳೆದ ಎರಡು ತಿಂಗಳಿನ ಕೋರ್ಸ್ ಪ್ರಾರಂಭ ಮಾಡಿದ್ದೇವೆ. ಇದಕ್ಕೆ ಏನು ಖರ್ಚಾಗಿದೆ ಎನ್ನುವ ಮಾಹಿತಿ ಕೇಳಿದ್ದೀರಿ. ಇದುವರೆಗೆ 3 ಕೋಟಿ 26 ಲಕ್ಷ 85 ಸಾವಿರದ 824 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ survey work, other things, recruitment, payment ಕೊಟ್ಟಿರುವುದು, providing fencing for Gulbarga land, purchase of office equipments, stationery, payment of KRIDL, Bangalore, salary, staff, etc., ಇವುಗಳಿಗೆಲ್ಲ 3 ಕೋಟಿ 26 ಲಕ್ಷ ರೂಪಾಯಿಗಳಾಗಿದ್ದು ನಮ್ಮ ಸರ್ಕಾರ ಕೊಟ್ಟಿರುವ 10 ಕೋಟಿ ರೂಪಾಯಿಗಳಲ್ಲಿ ಇದುವರೆಗೂ ಖರ್ಚು ಮಾಡಿದ್ದೇವೆ. ಇನ್ನೂ ಕೇಂದ್ರ ಸರ್ಕಾರದ ಹಣ ಬಂದಿಲ್ಲ. ಇದನ್ನು ಬಹಳ ಯಶಸ್ವಿಯಾಗಿ ಮಾಡುತ್ತಿದ್ದೇವೆ.

ಶ್ರೀ ಖಮರುಲ್ ಇಸ್ಲಾಂ: I have got all the details. What I am saying is, the programme which was given is for the different courses. This COE building is there just by the side of my house. I have gone and seen the building. They wanted to start the building. Just they started IT courses. In information Technology India is super. What we want is that why you have gone for German technology Welding? Already welding is there. Now you have to go for international welding. All these programmes are there. What I am saying, as a Minister you should see that this programme should go with speed. You are giving Rs. 2 crore in 3 months for the consultancy. What benefit you took in 3 months or in 6 months? ತಾವು ಈ consultancy ಎಷ್ಟು ಕೋಟಿ ಕೊಡುತ್ತೀರಿ? ಹಣ ಕೊಟ್ಟಿದ್ದಾರೆ, ಆದರೆ 3 ತಿಂಗಳಲ್ಲಿ ಎಷ್ಟು ಕೆಲಸ finish ಆಗಿದೆ? All the five courses are started in July 2011.ಇನ್ನೂ ಬಿಲ್ಡಿಂಗ್ ರೆಡಿ ಇಲ್ಲ. Tender notification and survey ಆಯಿತು. ಏತಕ್ಕೆ ಪ್ರಾರಂಭ ಮಾಡಿಲ್ಲ. This is very prestigious for Karnataka, Kannadiga ಮತ್ತು ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ತಾವು ಮಂತ್ರಿಗಳಿದ್ದೀರಾ ಕೆಲಸ ಮಾಡಿ, This is not for me or for you. Take the advantage of the scheme.

ಶ್ರೀ ಬಿ. ಎನ್. ಬಚ್ಚೇಗೌಡ: ಮಾಡುತ್ತೇನೆ. permanent building ಆದ ನಂತರವೇ ಎಲ್ಲಾ ಕೆಲಸ ಆಗುತ್ತದೆ. ಹಣ release ಆಗಿದ್ದು ಮೊನ್ನೆ. ಬಜೆಟ್‌ನಲ್ಲಿ 10 ಕೋಟಿ ರೂಪಾಯಿ ಕೊಟ್ಟಿದ್ದರು. ಕೇಂದ್ರ ಸರ್ಕಾರದ ಬಜೆಟ್, ನಮ್ಮ ಬಜೆಟ್ ಒಟ್ಟಾಗಿ ಆಗಬೇಕಾಗಿತ್ತು. Amount ಬಂದ ನಂತರವೇ ನವೆಂಬರ್ ತಿಂಗಳಲ್ಲಿ ಈ process ಮಾಡಬೇಕಾಗುತ್ತದೆ. ತೆಗೆದುಕೊಳ್ಳುವುದಕ್ಕೆ Consultancy, Society formation, Chief Secretary, Governing Council.

ಅಧ್ಯಕ್ಷರು: ಮಾನ್ಯ ಸದಸ್ಯರೆ, ಮಂತ್ರಿಯವರು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ಎನ್. ಬಚ್ಚೇಗೌಡ: ಇದೆಲ್ಲ ಮಾಡಿದ್ದೇವೆ. ತಾವೇನು ಹೇಳುತ್ತೀರಿ ಅದನ್ನು ಮಾಡುತ್ತೇವೆ.

ಅಧ್ಯಕ್ಷರು: ಹೇಳಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ: One thing I will tell you Sir, for machines they take and it should not lapse, you will have Rs.60 crore with you, without purchasing, Purchase Order ಕೊಟ್ಟಿದ್ದಾರೆ. I have written to the Chief Secretary and the then Chief Minister.

ಅಧ್ಯಕ್ಷರು: ಇದು question hour. The Minister has promised.

ಶ್ರೀ ಬಿ. ಎನ್. ಬಚ್ಚೇಗೌಡ: That is different, this is different, we have not purchased. ಇನ್ನೂ ಮಾಡಿಲ್ಲ.

ಶ್ರೀ ಖಮರುಲ್ ಇಸ್ಲಾಂ: That is what I am telling.

ಅಧ್ಯಕ್ಷರು: ಸಾಕು. Hon'ble Minister has promised.

ಶ್ರೀ ಬಿ. ಎನ್. ಬಚ್ಚೇಗೌಡ: That is different. We have started the courses in the month of November and December.

ಶ್ರೀ ಖಮರುಲ್ ಇಸ್ಲಾಂ: ನಾವೂ ನೀವೂ ಅಲ್ಲಿಗೆ ಹೋಗೋಣ.

ಶ್ರೀ ಬಿ. ಎನ್. ಬಚ್ಚೇಗೌಡ: ಹೋಗೋಣ. O.K. Thank you.